**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಪಿ ಸುಧಾಮ್ ದಾಸ್ ಇವರ ಗಮನ ಸೆಳೆಯುವ ಸೂಚನೆ ನಿಯಮ 72 ಕ್ಕೆ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

***

**ಸೂಚನೆ:** (ಕರ್ನಾಟಕ) ರಾಜ್ಯವು ಒಳಗೊಂಡಂತೆ ದೇಶದ ಅನೇಕ ರಾಜ್ಯಗಳಲ್ಲಿ ದಶಕಗಳಿಂದ ಕೇಳಿಬರುತ್ತಿರುವ ಪರಿಶಿಷ್ಟ ಜಾತಿಯೊಳಗಿನ ಒಳಮೀಸಲಾತಿ ಕುರಿತ ಬೇಡಿಕೆಯು ನಾನಾ ಕಾರಣಗಳಿಂದ ಅನಗತ್ಯ ಗೊಂದಲ ಹಾಗೂ ಅತ್ಯಂತ ವಿವಾದಾತ್ಮಕ ವಿಷಯವಾಗಿದ್ದು ಒಳಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಪ್ರಸ್ತುತ ಕಾನೂನು ಅಡೆತಡೆ ತೆರವುಗೊಳಿಸುವ ಸಂಬಂಧ (ನಮ್ಮ ರಾಜ್ಯ) ಸರ್ಕಾರವು ಕೈಗೊಳ್ಳಬಹುದಾದ ಕ್ರಮಗಳಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳಿಂದ ವಿವರಣೆ ಬಯಸುವ ಉದ್ದೇಶದಿಂದ ಸದರಿ ವಿಷಯ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

****

**ಉತ್ತರ:-** ಮಾನ್ಯ ಸರ್ವೋಚ್ಚ ನ್ಯಾಯಾಲಯದ ಇ.ವಿ. ಚಿನ್ನಯ್ಯ vs ಆಂದ್ರಪ್ರದೇಶ ಸರ್ಕಾರ ಪ್ರಕರಣದಲ್ಲಿ, ಮಾಡಿರುವ ಆದೇಶದಂತೆ ಒಳ ಮೀಸಲಾತಿ ಜಾರಿಗೊಳಿಸುವುದಕ್ಕೆ ರಾಜ್ಯ ಸರ್ಕಾರಗಳಿಗೆ ಅವಕಾಶವಿರುವುದಿಲ್ಲ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಕೇವಲ ಶಿಫಾರಸ್ಸು ಮಾತ್ರ ಮಾಡಬಹುದಾಗಿದೆ.

ಅದರಂತೆ, ಕರ್ನಾಟಕ ರಾಜ್ಯದಲ್ಲಿನ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಒಟ್ಟು 101 ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ಈಗಾಗಲೇ ದಿನಾಂಕ: 24-03-2023 ರಂದು ನಡೆದ ಸಚಿವ ಸಂಪುಟದ ತೀರ್ಮಾನದಂತೆ ಭಾರತ ಸರ್ಕಾರಕ್ಕೆ ದಿನಾಂಕ: 28-03-2023 ಹಾಗೂ ದಿನಾಂಕ: 31-03-2023 ರ ತಿದ್ದುಪಡಿ ಆದೇಶಗಳಂತೆ ಶಿಫಾರಸ್ಸು ಮಾಡಲಾಗಿದೆ.

ಈ ಸಂಬಂಧ, ದಿನಾಂಕ: 08-06-2023 ರಂದು ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು ರಾಜ್ಯ ಸರ್ಕಾರಕ್ಕೆ ಈ ಕೆಳಕಂಡಂತೆ ತಿಳಿಸಿರುತ್ತದೆ.

> **"I am directed to refer to your D.O. letter No: SWD D2 SAD 2014 (Part) Dated: 28-03-2023 and 31-03-2023 addressed to Secretary, Department of Social Justice and Empowerment on the above mentioned subject and to say that the matter of sub-categorization of Scheduled Castes is presently sub-judice in the Supreme Court in the matter of State of Punjab vs Davinder Singh and ors. (Civil Appeal No. 2317 of 2011)"**

ಪರಿಶಿಷ್ಟ ಜಾತಿ ಒಳ ಮೀಸಲಾತಿ ಕುರಿತು ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿ ಬಾಕಿ ಇರುತ್ತದೆ.

**ಕಡತ ಸಂಖ್ಯೆ: SWD/503/SLP/2023**

**(ಡಾ.ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.